ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 03-12-1970.

*ಎದುರಿಸಲು ಕಾಮನೆಗಳ ತ್ಯಾಗ* (सामना करने के लिए कामनाओं का त्याग)

ಇಂದು ಪ್ರತಿಯೊಬ್ಬರೂ ಅವ್ಯಕ್ತ ಸ್ಥಿತಿಯ ಅನುಭವ ಮಾಡುತ್ತಿದ್ದಾರೆ, ಎಷ್ಟು ಎಲ್ಲರೂ ನಿರಾಕಾರಿ ಮತ್ತು ಅಲಂಕಾರಿ ಆಗಿರುವಿರಿ ಅದನ್ನು ನೋಡುತ್ತಿರುವೆವು. ಎರಡೂ ಆವಶ್ಯಕ. ಅಲಂಕಾರಿ ಎಂದಿಗೂ ದೇಹ ಅಹಂಕಾರಿ ಆಗುವುದಿಲ್ಲ. ಆದ್ದರಿಂದ ಸದಾ ತಮ್ಮನ್ನು ತಾವು ನಿರಾಕಾರಿ ಮತ್ತು ಅಲಂಕಾರಿ ಆಗಿದ್ದೇನಾ ಎಂದು ನೋಡಿಕೊಳ್ಳಿ. ಇದೇ ಆಗಿದೆ ಮನ್ಮನಾಭವ, ಮಧ್ಯಾಜಿಭವ. ಸ್ವಸ್ಥಿತಿಯನ್ನು ಮಾಸ್ಟರ್ ಸರ್ವಶಕ್ತಿವಂತ ಎಂದು ಹೇಳಲಾಗುತ್ತದೆ. ಹಾಗಾದರೆ ಮಾಸ್ಟರ ಸರ್ವಶಕ್ತಿವಂತ ಆಗಿರುವಿರಲ್ಲವೇ? ಈ ಸ್ಥಿತಿಯಲ್ಲಿ ಸರ್ವಪರಿಸ್ಥಿತಿಗಳಿಂದ ದೂರವಾಗುತ್ತಾರೆ. ಈ ಸ್ಥಿತಿಯಲ್ಲಿ ಸ್ವಭಾವ ಎಂದರೆ ಸರ್ವರಲ್ಲಿ "ಸ್ವ"ನ ಭಾವ ಅನುಭವವಾಗುತ್ತದೆ ಮತ್ತು ಅನೇಕ ಹಳೆಯ ಸ್ವಭಾವ ಸಮಾಪ್ತಿಯಾಗುತ್ತವೆ. ಸ್ವಭಾವ ಎಂದರೆ ಸ್ವನಲ್ಲಿ ಆತ್ಮನ ಭಾವವನ್ನು ನೋಡುವುದು ಮತ್ತೆ ಈ ಭಾವ-ಸ್ವಭಾವದ ಮಾತುಗಳು ಸಮಾಪ್ತಿಯಾಗುವವು. ಎದುರಿಸುವ ಎಲ್ಲಾ ಶಕ್ತಿಗಳು ಪ್ರಾಪ್ತಿಯಾಗುವವು. ಎಲ್ಲಿಯವರೆಗೆ ಯಾವುದಾದರೂ ಸೂಕ್ಷ್ಮ ಅಥವಾ ಸ್ಥೂಲ ಕಾಮನೆಯಿರುವುದೋ ಅಲ್ಲಿಯವರೆಗೆ ಎದುರಿಸುವ ಶಕ್ತಿ ಬರುವುದಿಲ್ಲ. ಕಾಮನೆಗಳು ಎದುರಿಸಲು ಕೊಡುವುದಿಲ್ಲ. ಆದ್ದರಿಂದ ಬ್ರಾಹ್ಮಣರ ಅಂತಿಮ ಸ್ವರೂಪ ಏಕೆ ಗಾಯನ ಮಾಡಲ್ಪಡುತ್ತದೆ ಗೊತ್ತಾ? "ಇಚ್ಛಾ ಮಾತ್ರಂ ಅವಿದ್ಯಾ" ಈ ಸ್ಥಿತಿಯ ವರ್ಣನೆಯಾಗಿದೆ. ಈಗ ತಮ್ಮನ್ನು ತಾವೇ ಕೇಳಿಕೊಳ್ಳಿ ನನ್ನ ಸ್ಥಿತಿ ಇಚ್ಛೆಯ ಅವಿದ್ಯೆಯಾಗಿದೆಯಾ ಎಂದು? ಯಾವಾಗ ಇಂತಹ ಸ್ಥಿತಿಯಾಗುವುದೋ ಆಗ ಜಯಜಯಕಾರ ಮತ್ತು ಹಾಹಾಕಾರವಾಗುವುದು. ತಮ್ಮೆಲ್ಲರ ಅಂತಿಮ ಸ್ವರೂಪ ಇದಾಗಿದೆ. ಶರೀರ ಬಿಡುವಾಗ ಹೇಗೆ ಬುದ್ಧಿಯಲ್ಲಿ ಸ್ಪಷ್ಟವಾಗಿರುತ್ತದೆಯೋ, ಈಗಲೇ ಇದನ್ನು ಬಿಟ್ಟು ಹೊಸ ಶರೀರ ಧಾರಣೆ ಮಾಡಬೇಕು ಎಂದು ತಮ್ಮ ಸ್ವರೂಪದ ಸಾಕ್ಷಾತ್ಕಾರ ಆಗುತ್ತದೆಯೋ ಹಾಗೆ ಸದಾ ತಮ್ಮ ಸಂಪೂರ್ಣ ಮತ್ತು ಭವಿಷ್ಯದ ಸ್ವರೂಪ ಕಂಡುಬರಬೇಕು. ಈ ರೀತಿ ಸದಾ ಬುದ್ಧಿಯಲ್ಲಿ ಈಗಲೇ ಈ ಸ್ವರೂಪವನ್ನು ಧಾರಣೆ ಮಾಡಿಕೊಳ್ಳಬೇಕು ಎಂಬುದೇ ಇರಬೇಕು. ಸ್ಥೂಲ ವಸ್ತ್ರವನ್ನು ಹೇಗೆ ಬಹಳ ಬೇಗ ಧಾರಣೆ ಮಾಡುತ್ತೀರೋ ಹಾಗೆಯೇ ಸಂಪೂರ್ಣ ಸ್ವರೂಪ ಧಾರಣೆ ಮಾಡಬೇಕು. ಬಹಳ ಸುಂದರ ಮತ್ತು ಶ್ರೇಷ್ಠ ವಸ್ತ್ರ ಎದುರಿಗೆ ನೋಡಿದಾಗ ಹಳೆಯ ವಸ್ತ್ರವನ್ನು ಬಿಟ್ಟು ಆ ಹೊಸದನ್ನು ಧಾರಣೆ ಮಾಡುವುದು ಕಷ್ಟವಾಗುತ್ತದೆಯೇ? ಅದೇ ರೀತಿ ತಮ್ಮ ಶ್ರೇಷ್ಠ, ಸಂಪೂರ್ಣ ಸ್ವರೂಪ ಅಥವಾ ಸ್ಥಿತಿಯನ್ನು ತಿಳಿದಿರುವಾಗ, ಮತ್ತು ಅದು ಎದುರಿಗಿದ್ದಾಗ ಆ ಸಂಪೂರ್ಣ, ಶ್ರೇಷ್ಠ ಸ್ವರೂಪ ಧಾರಣೆ ಮಾಡಲು ತಡವೇಕೆ? ಯಾವುದೇ ಅಹಂಕಾರವಿದ್ದರೆ ಅದು ಅಲಂಕಾರಹೀನ ಮಾಡುತ್ತದೆ. ಆದ್ದರಿಂದ ನಿರಂಹಕಾರಿ ಮತ್ತು ನಿರಾಕಾರಿ ನಂತರ ಅಲಂಕಾರಿ, ಈ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಎಲ್ಲಾ ಆತ್ಮರ ಕಲ್ಯಾಣಕಾರಿಯಾಗುವವರೇ ವಿಶ್ವರಾಜ್ಯಾಧಿಕಾರಿಯಾಗುವರು. ಸರ್ವರ ಕಲ್ಯಾಣಕಾರಿಯಾದಾಗ ತಮ್ಮ ಅಕಲ್ಯಾಣವಾಗುವುದೇ? ಸದಾ ತಮ್ಮನ್ನು ವಿಜಯರತ್ನವೆಂದು ತಿಳಿದು ಪ್ರತಿಯೊಂದು ಸಂಕಲ್ಪ ಮತ್ತು ಕರ್ಮವನ್ನು ಮಾಡಿ. ಮಾಸ್ಟರ್ ಸರ್ವಶಕ್ತಿವಂತ ಎಂದಿಗೂ ಸೋಲನ್ನು ಹೊಂದುವುದಿಲ್ಲ. ಸೋತವರು ಕೇವಲ ಸೋಲನ್ನಲ್ಲ ಆದರೆ ಧರ್ಮರಾಜನ ಹೊಡೆತವನ್ನು ತಿನ್ನುತ್ತಾರೆ. ಸೋಲು ಮತ್ತು ಹೊಡೆತ ಮಂಜೂರು ಇದೆಯಾ? ಸೋಲನ್ನು ಅನುಭವಿಸುವಾಗ ಮೊದಲು ಹೊಡೆತವನ್ನು ಸಮ್ಮುಖದಲ್ಲಿ ನೋಡಿ. ಹೊಡೆತದಿಂದ ಭೂತ ಓಡಿಹೋಗುತ್ತವೆ ಹಾಗಾದರೆ ಹೊಡೆತವನ್ನು ಎದುರಿಗೆ ಇಟ್ಟುಕೊಳ್ಳುವುದರಿಂದ ಭೂತಗಳು ಓಡಿಹೋಗುತ್ತವೆ. ಇನ್ನೂವರೆಗೂ ಸೋಲನ್ನು ಅನುಭವಿಸುವುದು ಯಾರ ಕೆಲಸ? ಮಾಸ್ಟರ್ ಸರ್ವಶಕ್ತಿವಂತರದಲ್ಲ. ಆದ್ದರಿಂದ ಈಗ ಅದೇ ಹಳೆಯ ಮಾತುಗಳು, ಹಳೆಯ ನಡತೆ ಮಾಸ್ಟರ್ ಸರ್ವಶಕ್ತಿವಂತರ ಮುಖದಲ್ಲಿ ಶೋಭಿಸುವುದಿಲ್ಲ. ಆದ್ದರಿಂದ ಸಂಪೂರ್ಣ ಸ್ವರೂಪವನ್ನು ಈಗಲೇ ಧಾರಣೆ ಮಾಡುವ ಪ್ರಯತ್ನವಲ್ಲ, ಪ್ರತಿಜ್ಞೆಯನ್ನು ತಮ್ಮೊಂದಿಗೆ ತಾವೇ ಮಾಡಿಕೊಳ್ಳಿ. ಪ್ರಯತ್ನ ಮತ್ತು ಪ್ರತಿಜ್ಞೆಯಲ್ಲಿ ಬಹಳ ಅಂತರವಿದೆ. ಪ್ರತಿಜ್ಞೆಯನ್ನು ಒಂದು ಕ್ಷಣದಲ್ಲಿ ಮಾಡಲಾಗುತ್ತದೆ. ಪ್ರಯತ್ನಕ್ಕೆ ಸಮಯ ಹಿಡಿಯುತ್ತದೆ. ಆದ್ದರಿಂದ ಈಗ ಪ್ರಯತ್ನದ ಸಮಯವೂ ಹೋಯಿತು. ಈಗ ಪ್ರತಿಜ್ಞೆ ಮತ್ತು ಸಂಪೂರ್ಣ ರೂಪದ

ಪ್ರತ್ಯಕ್ಷತೆ ಮಾಡಬೇಕು. ಸಾಕ್ಷಾತ್ ತಂದೆಯ ಸಮಾನ ಸಾಕ್ಷಾತ್ಕಾರ ಮೂರ್ತಿಯಾಗಬೇಕು. ಈ ರೀತಿ ತಮ್ಮನ್ನು ತಾವು ಸಾಕ್ಷಾತ್ಕಾರಮೂರ್ತಿ ಎಂದು ತಿಳಿಯುವುದರಿಂದ ಎಂದಿಗೂ ಸೋಲನ್ನು ಅನುಭವಿಸುವುದಿಲ್ಲ. ಈಗ ಪ್ರತಿಜ್ಞೆಯ ಸಮಯವಾಗಿದೆಯೇ ಹೊರತು ಸೋಲನ್ನು ಅನುಭವಿಸುವ ಸಮಯವಲ್ಲ. ಮತ್ತೆ ಮತ್ತೆ ಸೋಲನ್ನು ಅನುಭವಿಸಿದರೆ ಅವರ ಭವಿಷ್ಯವೇನಾಗುವುದು? ಉನ್ನತ ಪದವಿಯನ್ನು ಪಡೆಯುವುದಿಲ್ಲ. **ಮತ್ತೆ ಮತ್ತೆ ಸೋಲನ್ನು ಅನುಭವಿಸುವವರು ದೇವತೆಗಳಿಗೆ ಹಾರ ಮಾಡುವವರು ಆಗಬೇಕಾಗುತ್ತದೆ. ಎಷ್ಟು ಸಾರಿ, ಮತ್ತೆ ಮತ್ತೆ ಸೋಲನ್ನು ಉಣ್ಣುತ್ತೀರೋ ಅಷ್ಟು ಮತ್ತೆ ಮತ್ತೆ ಹಾರ ಮಾಡಬೇಕಾಗುವುದು. ರತ್ನಜಡಿತ ಹಾರ ಮಾಡುತ್ತಾರಲ್ಲವೇ? ನಂತರ ಮತ್ತೆ ದ್ವಾಪರದಿಂದಲೂ ಭಕ್ತರಾದಾಗ ಅನೇಕ ಮೂರ್ತಿಗಳಿಗೆ ಬಾರಿಬಾರಿ ಹಾರ ಹಾಕಬೇಕಾಗುವುದು.** ಆದ್ದರಿಂದ ಸೋಲನ್ನು ಅನುಭವಿಸಬೇಡಿ. ಇಲ್ಲಿ ಯಾರಾದರೂ ಸೋಲನ್ನು ಉಣ್ಣುವವರು ಇರುವರೇ? ಸೋಲನ್ನು ಅನುಭವಿಸದಿದ್ದರೆ ಬಲಿಹಾರ ಆಗುತ್ತಾರೆ. ಈಗ ಬಲಿಹಾರ ಅಥವಾ ಬಲಿಯಾಗುವ ತಯಾರಿ ಮಾಡುತ್ತಿದ್ದೀರಿ. ಸಮಾಪ್ತಿಯಲ್ಲಿ ಬಲಿಯಾಗುವುದಿದೆಯೋ ಅಥವಾ ಆಗಿರುವಿರೋ? ಯಾರು ಬಲಿಹಾರಿಯಾಗಿದ್ದೀರೋ ಅವರ ಪರೀಕ್ಷೆ ತೆಗೆದುಕೊಳ್ಳುತ್ತೇವೆ. ಇಂದಿನಿಂದ ಯಾವುದೇ ದೂರು ನಿಮ್ಮೆಲ್ಲರಿಂದ ಬರಬಾರದು. ಸೋಲದೆ ಇರುವಾಗ ಇನ್ನೆಲ್ಲಿಯ ದೂರು? ತಮ್ಮೆಲ್ಲರ ಪರೀಕ್ಷೆ ಪತ್ರಿಕೆ ವತನದಲ್ಲಿ ತಯಾರಾಗುತ್ತಿದೆ. ಓಂ ಶಾಂತಿ.

ಅವ್ಯಕ್ತ ಮುರಳಿ 03-12-1970.

***ಎದುರಿಸಲು ಕಾಮನೆಗಳ ತ್ಯಾಗ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ನಿರಾಕಾರಿ ಮತ್ತು ಅಲಂಕಾರಿ ಆಗಿರುವ ಮನ್ಮನಾ ಭವ! ಮತ್ತು ಮಧ್ಯಾಜಿ ಭವ! ಎಂಬ ವರದಾನದ ವರದಾನಿ.

2. ನಾನು ಸರ್ವ ಪರಿಸ್ಥಿತಿಗಳಿಂದ ಅತೀತವಾಗಿ ಆತ್ಮಭಾವವನ್ನು ಅನುಭವ ಮಾಡಿಕೊಂಡಿದ್ದೇನೆ.

3. ನಾನು "ಇಚ್ಛಾ ಮಾತ್ರಂ ಅವಿದ್ಯಾ" ಸ್ಥಿತಿಯಿಂದ ಜೈಜೈಕಾರಗಳನ್ನು ಪಡೆದಿದ್ದೇನೆ.

4. ನಾನು ಸಂಪೂರ್ಣತೆಯ ಸುಂದರ ಮತ್ತು ಶ್ರೇಷ್ಠ ವಸ್ತ್ರವನ್ನು ಧರಿಸಿದ್ದೇನೆ.

5. ನಾನು ನಿರಹಂಕಾರಿ, ನಿರಾಕಾರಿ ಮತ್ತು ಅಲಂಕಾರಿ ಸ್ಥಿತಿಯಲ್ಲಿ ಸರ್ವಾತ್ಮರ ಕಲ್ಯಾಣವನ್ನು ಮಾಡಿರುವ ವಿಶ್ವರಾಜ್ಯಾಧಿಕಾರಿ.

6. ನಾನು ಪರಿಪೂರ್ಣ ಸ್ವರೂಪವನ್ನು ಧಾರಣೆ ಮಾಡುವ ಪ್ರತಿಜ್ಞೆಯನ್ನು ಮಾಡಿ ಪ್ರತ್ಯಕ್ಷ ಮಾಡಿರುವ ಬಾಪ್ ಸಮಾನ ಸಾಕ್ಷಾತ್ಕಾರ ಮೂರ್ತಿ.

7. ನಾನು ಸರ್ವ ಪರಿಸ್ಥಿತಿಗಳಲ್ಲಿ ವಿಜಯವನ್ನು ಹೊಂದಿ ಉನ್ನತೋನ್ನತವಾದ ಪದವಿಯನ್ನು ಪಡೆದಿದ್ದೇನೆ.